**ಕರ್ನಾಟಕ ವಿಧಾನ ಪರಿಷತ್ತು**

| | |
|---|---|
| **ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ :** | 829 |
| **ಸದಸ್ಯರ ಹೆಸರು :** | ಶ್ರೀ ಗೋವಿಂದರಾಜು (ವಿಧಾನಸಭೆಯಿಂದ ಚುನಾಯಿತರಾದವರು) |
| **ಉತ್ತರಿಸಬೇಕಾದ ದಿನಾಂಕ :** | 20-09-2022 |
| **ಉತ್ತರಿಸುವವರು :** | ಪೌರಾಡಳಿತ, ಸಣ್ಣ ಕೈಗಾರಿಕೆಗಳು ಹಾಗೂ ಸಾರ್ವಜನಿಕ ವಲಯ ಉದ್ಯಮಗಳ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಸ್ಥಳೀಯ ಸಂಸ್ಥೆಗಳಾದ ಪುರಸಭೆ, ನಗರಸಭೆ, ಪಟ್ಟಣ ಪಂಚಾಯಿತಿ ಹಾಗೂ ಪಾಲಿಕೆಗಳಿಂದ ಕಳೆದ 05 ವರ್ಷಗಳಲ್ಲಿ ತೆರಿಗೆ ರೂಪದಲ್ಲಿ ವಸೂಲಿ ಮಾಡಲಾದ ಭಿಕ್ಷುಕರ ಸೆಸ್ ಹಣವೆಷ್ಟು; (ಜಿಲ್ಲಾವಾರು ವಿವರವಾದ ಮಾಹಿತಿ ನೀಡುವುದು) | (see below) |

ರಾಜ್ಯದ ನಗರಸಭೆ, ಪುರಸಭೆ, ಪಟ್ಟಣ ಪಂಚಾಯಿತಿ ಹಾಗೂ ಮಹಾನಗರ ಪಾಲಿಕೆಗಳು (ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯನ್ನು ಹೊರತುಪಡಿಸಿ) ಕಳೆದ 05 ವರ್ಷಗಳಲ್ಲಿ ತೆರಿಗೆ ರೂಪದಲ್ಲಿ ವಸೂಲಿ ಮಾಡಲಾದ ಭಿಕ್ಷುಕರ ಉಪಕರ ಹಣ ರೂ. 121.95ಕೋಟಿ ಸಂಗ್ರಹವಾಗಿದೆ. ವಿವರಗಳು ಈ ಕೆಳಗಿನಂತಿದೆ.

| ಕ್ರ ಸಂ | ವರ್ಷ | ಸಂಗ್ರಹ ಮೊತ್ತ (ರೂ.ಕೋಟಿಗಳಲ್ಲಿ) | ಶುಲ್ಕದ ಮೊತ್ತ (ಶೇ. 10 ರಷ್ಟು) (ರೂ. ಕೋಟಿಗಳಲ್ಲಿ) | ಪಾವತಿಸಿದ ಮೊತ್ತ (ರೂ. ಕೋಟಿಗಳಲ್ಲಿ) | ಬಾಕಿ ಮೊತ್ತ |
|---|---|---|---|---|---|
| | ಹಿಂದಿನ ಬಾಕಿ | | | | **31.76** |
| 1 | 2017-18 | 20.92 | 2.092 | 11.57 | 39.02 |
| 2 | 2018-19 | 22.92 | 2.292 | 12.26 | 47.39 |
| 3 | 2019-20 | 23.91 | 2.391 | 39.04 | 29.88 |
| 4 | 2020-21 | 29.86 | 2.986 | 28.63 | 28.12 |
| 5 | 2021-22 | 24.34 | 2.434 | 20.53 | 29.50 |
| | **ಒಟ್ಟು** | **121.95** | **12.195** | **112.03** | **29.50** |

2017-18ನೇ ಸಾಲಿಗಿಂತ ಹಿಂದಿನ ಬಾಕಿ ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳಿಂದ (ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯನ್ನು ಹೊರತುಪಡಿಸಿ) **ರೂ.31.76** ಕೋಟಿಗಳಾಗಿದ್ದು, ಪ್ರಸ್ತುತ 2021-22ನೇ ಸಾಲಿನಲ್ಲಿ **ರೂ.29.50 ಕೋಟಿ** ಪಾವತಿಸಲು ಬಾಕಿಯಿರುತ್ತದೆ. (ಜಿಲ್ಲಾವಾರು ಮಾಹಿತಿಯನ್ನು ಅನುಬಂಧದಲ್ಲಿ ನೀಡಲಾಗಿದೆ.)

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಕಳೆದ 05 ವರ್ಷಗಳಲ್ಲಿ ತೆರಿಗೆ ರೂಪದಲ್ಲಿ ವಸೂಲಿ ಮಾಡಲಾದ ಭಿಕ್ಷುಕರ ಉಪಕರ ಹಣ ರೂ. 282.50ಕೋಟಿ ಸಂಗ್ರಹವಾಗಿದೆ. ವಿವರಗಳು ಈ ಕೆಳಗಿನಂತಿದೆ.

| ಕ್ರಸಂ | ವರ್ಷ | ಸಂಗ್ರಹ ಮೊತ್ತ (ರೂ. ಕೋಟಿಗಳಲ್ಲಿ) | ಶುಲ್ಕದ ಮೊತ್ತ (ಶೇ. 10 ರಷ್ಟು) (ರೂ. ಕೋಟಿಗಳಲ್ಲಿ) | ಪಾವತಿ ಮೊತ್ತ (ರೂ. ಕೋಟಿಗಳಲ್ಲಿ) |
|---|---|---|---|---|
| 1 | 2017–18 | 47.09 | 4.71 | 19.22 |
| 2 | 2018–19 | 54.66 | 5.47 | 10.00 |
| 3 | 2019–20 | 57.24 | 5.72 | 102.00 |
| 4 | 2020–21 | 59.79 | 5.98 | 46.00 |
| 5 | 2021–22 | 63.72 | 6.37 | 45.00 |
| ಒಟ್ಟು | | **282.50** | **28.25** | **222.22** |

| | | |
|---|---|---|
| ಆ) | ವಸೂಲಾದ ಸೆಸ್ ಹಣದಲ್ಲಿ ಯಾವ ಯಾವ ಕಲ್ಯಾಣ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ; ಎಷ್ಟು ಹಣವನ್ನು ಸಮಾಜ ಕಲ್ಯಾಣ ಇಲಾಖೆಗೆ ವರ್ಗಾಯಿಸಲಾಗಿದೆ; | ನಗರ ಸ್ಥಳೀಯ ಸಂಸ್ಥೆಗಳು ಆಸ್ತಿ ತೆರಿಗೆ ಮೇಲೆ ಶೇ. 3ರಷ್ಟು ಭಿಕ್ಷುಕರ ಉಪಕರವನ್ನು ವಸೂಲು ಮಾಡಿ, ಅದರಲ್ಲಿ ಶೇ. 10ರಷ್ಟು ಸಂಗ್ರಹಣಾ ವೆಚ್ಚವನ್ನು ನಗರ ಸ್ಥಳೀಯ ಸಂಸ್ಥೆಗಳು ಉಳಿಸಿಕೊಂಡು, ಬಾಕಿ ಶೇ. 90ರಷ್ಟು ಮೊತ್ತವನ್ನು ಸಮಾಜ ಕಲ್ಯಾಣ ಇಲಾಖೆಯಡಿ ಬರುವ ಕೇಂದ್ರ ಪರಿಹಾರ ಸಮಿತಿಗೆ ವರ್ಗಾಯಿಸಲಾಗುತ್ತಿದೆ. ಕಲ್ಯಾಣ ಕಾರ್ಯಕ್ರಮಗಳನ್ನು ಸಮಾಜ ಕಲ್ಯಾಣ ಇಲಾಖೆಯಿಂದ ಹಮ್ಮಿಕೊಳ್ಳಲಾಗುತ್ತದೆ.<br>ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯನ್ನು ಒಳಗೊಂಡಂತೆ ರಾಜ್ಯದ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳಿಂದ ಸಮಾಜ ಕಲ್ಯಾಣ ಇಲಾಖೆಯ ಕೇಂದ್ರ ಪರಿಹಾರ ಸಮಿತಿಗೆ ಒಟ್ಟು **ರೂ. 334.25** ಕೋಟಿಗಳನ್ನು ವರ್ಗಾಯಿಸಲಾಗಿದೆ. |
| ಇ) | ವರ್ಗಾಯಿಸಿದ್ದಲ್ಲಿ, ಆ ಮೊತ್ತವೆಷ್ಟು ವರ್ಗಾಯಿಸದಿದ್ದಲ್ಲಿ ಇದಕ್ಕೆ ಕಾರಣಗಳೇನು; (ವಿವರಗಳನ್ನು ನೀಡುವುದು) | ಸಮಾಜ ಕಲ್ಯಾಣ ಇಲಾಖೆಯ ಕೇಂದ್ರ ಪರಿಹಾರ ಸಮಿತಿಗೆ ಒಟ್ಟು **ರೂ. 334.25** ಕೋಟಿಗಳನ್ನು ವರ್ಗಾಯಿಸಲಾಗಿದೆ.<br>ಕಳೆದ ಐದು ವರ್ಷಗಳಲ್ಲಿ ಒಟ್ಟಾರೆ ಸಂಗ್ರಹವಾದ ಭಿಕ್ಷುಕರ ಉಪಕರ (ಶೇ. 90ರಷ್ಟು) ರೂ.364.005ಕೋಟಿ, ಇದರ ಪೈಕಿ ರೂ. **334.25** ಕೋಟಿಗಳನ್ನು ಪಾವತಿಸಲಾಗಿದೆ. ಹಿಂದಿನ ಬಾಕಿ ಮೊತ್ತವನ್ನು ಒಳಗೊಂಡಂತೆ ಒಟ್ಟು ರೂ.29.50 ಕೋಟಿ + ರೂ.32.28 ಕೋಟಿ ( ಬಿ.ಬಿ.ಎಂ.ಪಿ ಮೊತ್ತ) = ರೂ. 61.78 ಕೋಟಿಗಳು ಬಾಕಿಯಿರುತ್ತದೆ.<br>ಕಳೆದೆರಡು ವರ್ಷಗಳಲ್ಲಿ ಕೋವಿಡ್–19ರ ತೀವ್ರತೆಯಿಂದಾಗಿ ನಗರ ಸ್ಥಳೀಯ ಸಂಸ್ಥೆಗಳು ಆರ್ಥಿಕ ಸಂಕಷ್ಟ ಎದುರಿಸುತ್ತಿದ್ದರಿಂದ, ಬೃಹತ್ ಪ್ರಮಾಣದ ಹಿಂದಿನ ಬಾಕಿಯನ್ನು ಒಮ್ಮೆಗೆ ಪಾವತಿಸುವುದು ಕಷ್ಟಕರವಾಗಿರುತ್ತದೆ. |
| ಈ) | ವರ್ಗಾಯಿಸದಿದ್ದಲ್ಲಿ ಆ ಹಣ ಎಲ್ಲಿದೆ ಹಾಗೂ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಸರ್ಕಾರ ಯಾವ ಕ್ರಮಕೈಗೊಂಡಿದೆ? | **ಪೌರಾಡಳಿತ ಇಲಾಖೆಯಿಂದ ಕೈಗೊಂಡ ಕ್ರಮಗಳು**: ನಗರ ಸ್ಥಳೀಯ ಸಂಸ್ಥೆಗಳಲ್ಲಿ ಲೆಕ್ಕ ಪತ್ರಗಳ ದಾಖಲೆಗೆ ಅನುಷ್ಠಾನಗೊಳಿಸಿರುವ FBAS(Fund Based Accounting System) ತಂತ್ರಾಂಶದಲ್ಲಿ 2021–22ನೇ ಸಾಲಿನಿಂದ ಉಪಕರಗಳನ್ನು ಸ್ವಯಂಚಾಲಿತವಾಗಿ ಉಪಕರ ಮೀಸಲು ಬ್ಯಾಂಕ್ ಖಾತೆಗೆ (CESSES ESCROW BANK ACCOUNT) ವರ್ಗಾಯಿಸಿ ಸಂಬಂಧಿಸಿದ ಪ್ರಾಧಿಕಾರಗಳಿಗೆ ವರ್ಗಾಯಿಸಲು ತಂತ್ರಾಂಶದಲ್ಲಿ ಅಗತ್ಯ ಮಾರ್ಪಾಡು ಮಾಡಿ, ಉಪಕರಗಳನ್ನು ಅನ್ಯ ಉದ್ದೇಶಗಳಿಗೆ ಬಳಸಿಕೊಳ್ಳುವುದನ್ನು ತಡೆಯಲು ಕ್ರಮವಹಿಸಲಾಗಿದೆ. ಈ ಬಗ್ಗೆ ಪೌರಾಡಳಿತ ನಿರ್ದೇಶನಾಲಯದ ಸುತ್ತೋಲೆ ಸಂ: 21860 DMA 66 KMDS 2017-18, ದಿನಾಂಕ: 29–03–2021ರಲ್ಲಿ ರಾಜ್ಯದ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳ ಮುಖ್ಯಸ್ಥರುಗಳಿಗೆ ಸೂಕ್ತ ನಿರ್ದೇಶನ ನೀಡಲಾಗಿದೆ. 2021–22ನೇ ಸಾಲಿನಿಂದ ಉಪಕರಗಳನ್ನು ಅನ್ಯ ಉದ್ದೇಶಗಳಿಗೆ ಬಳಕೆ ಮಾಡಿಕೊಳ್ಳದೇ ಸಂಬಂಧಿಸಿದ ಪ್ರಾಧಿಕಾರಗಳಿಗೆ ಪಾವತಿಸಲಾಗುತ್ತಿದೆ.<br>ಪೌರಾಡಳಿತ ನಿರ್ದೇಶನಾಲಯದಿಂದ ಹಲವು ಪತ್ರಗಳು/ನೆನಪೋಲೆಗಳನ್ನು ಬರೆದು 2021–22 ಸಾಲಿನ ಪೂರ್ವದಲ್ಲಿ ಸಂಗ್ರಹಿಸಿ ಇಲಾಖೆಗೆ ಪಾವತಿಸಿರದ ಬಾಕಿ ಮೊತ್ತವನ್ನು ನಗರ ಸ್ಥಳೀಯ ಸಂಸ್ಥೆಗಳ ಸ್ವಂತ ನಿಧಿಯಿಂದ ಪಾವತಿಸಿ ತೀರುವಳಿ ಮಾಡಲು ರಾಜ್ಯದ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳ ಮುಖ್ಯಸ್ಥರುಗಳಿಗೆ ಕಟ್ಟುನಿಟ್ಟಾದ |

| | | |
|---|---|---|
| | | ಸೂಚನೆಗಳನ್ನು ನೀಡಲಾಗಿದೆ. ಪರಿಣಾಮವಾಗಿ ಕೋವಿಡ್‌ನಿಂದ ಆರ್ಥಿಕ ಅನಾನುಕೂಲತೆಗಳಿದ್ದರೂ ಸಾಕಷ್ಟು ಹಿಂದಿನ ಬಾಕಿಯನ್ನು ನಗರ ಸ್ಥಳೀಯ ಸಂಸ್ಥೆಗಳು ತೀರುವಳಿ ಮಾಡಿರುತ್ತಾರೆ. |

ಸಂಖ್ಯೆ: ನಅಇ 240 ಜಿಇಎಲ್ 2022(ಇ)

(ಎನ್.ನಾಗರಾಜು ಎಂಟಿಬಿ)
ಪೌರಾಡಳಿತ, ಸಣ್ಣ ಕೈಗಾರಿಕೆಗಳು ಹಾಗೂ ಸಾರ್ವಜನಿಕ ವಲಯ ಉದ್ಯಮಗಳ ಸಚಿವರು

